ಕರ್ನಾಟಕ ಸರ್ಕಾರ
ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟ್,
# 70, 2ನೇ ಮಹಡಿ, ಕೆ.ಎಂ.ಸಿ. ಬಿಲ್ಡಿಂಗ್, ಬಸವನಗುಡಿ ಪೋಸ್ಟ್ ಆಫೀಸ್ ಎದುರು, ಕೆ.ಆರ್. ರಸ್ತೆ,
ಬಸವನಗುಡಿ, ಬೆಂಗಳೂರು-560 004

ಇ-ಮೇಲ್ : yeshtrust@gmail.com ದೂರವಾಣಿ: 080-26671616

ಸಂಖ್ಯೆ:ಯಶಸ್ವಿನಿ/ವಿನಿ-1/ಗೈಡ್‌ಲೈನ್ಸ್-147/2017-18 ದಿನಾಂಕ:14-08-2017

## ಸುತ್ತೋಲೆ

ವಿಷಯ: ಯಶಸ್ವಿನಿ ಯೋಜನೆಗೆ ಸಂಬಂಧಿಸಿದಂತೆ ನೆಟ್‌ವರ್ಕ್ ಆಸ್ಪತ್ರೆಗಳು ಕಡ್ಡಾಯವಾಗಿ ಪಾಲಿಸಬೇಕಾದ ಮಾರ್ಗಸೂಚಿಗಳು

* * *

ಯಶಸ್ವಿನಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಯಶಸ್ವಿನಿ ಟ್ರಸ್ಟ್ ವತಿಯಿಂದ ನೆಟ್‌ವರ್ಕ್ ಆಸ್ಪತ್ರೆಗಳು ಈಗಾಗಲೇ ನಿಗದಿಪಡಿಸಿರುವ ಮಾರ್ಗಸೂಚಿಗಳ ಜೊತೆಗೆ ಈ ಕೆಳಕಂಡ ಮಾರ್ಗಸೂಚಿಗಳನ್ವಯ ಕಾರ್ಯನಿರ್ವಹಿಸತಕ್ಕದ್ದು.

**ಮಾರ್ಗಸೂಚಿಗಳು:**

- ಯಶಸ್ವಿನಿ ಫಲಾನುಭವಿಗಳು ಆಸ್ಪತ್ರೆಗಳಿಗೆ ಶಸ್ತ್ರಚಿಕಿತ್ಸೆಗೆ ದಾಖಲಾಗಿ ಬಿಡುಗಡೆ ಹೊಂದುವ ಅವಧಿಯವರೆಗೆ ಆಯಾ ಶಸ್ತ್ರಚಿಕಿತ್ಸೆಗೆ ನಿಗಧಿಪಡಿಸಿರುವ ಪ್ಯಾಕೇಜ್ ದರಕ್ಕಿಂತ ಔಷಧಿ/ ವೈದ್ಯಕೀಯ ನಿರ್ವಹಣೆ ವೆಚ್ಚದ ಹೆಸರಿನಲ್ಲಿ ಹೆಚ್ಚುವರಿ ಹಣವನ್ನು ಪಡೆದಿರುವುದು ವರದಿಯಾದಲ್ಲಿ ಹೆಚ್ಚುವರಿಯಾಗಿ ಪಡೆದ ಮೊತ್ತವನ್ನು ಸದರಿ ಆಸ್ಪತೆಯು ಫಲಾನುಭವಿಗೆ ಹಿಂದಿರುಗಿಸುವುದಲ್ಲದೇ, ಅಂತಹ ಆಸ್ಪತ್ರೆಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

- ನೆಟ್‌ವರ್ಕ ಆಸ್ಪತ್ರೆಗಳಲ್ಲಿ ಜನರಲ್ ವಾರ್ಡ್‌ಗಳಲ್ಲಿ ಬೆಡ್‌ಗಳು ಲಭವಿದ್ದರೂ ಫಲಾನುಭವಿಗಳಿಗೆ ಖಾಸಗಿ/twin/three sharing ವಾರ್ಡ್‌ಗಳಲ್ಲಿ ಒತ್ತಾಯ ಪೂರಕವಾಗಿ ದಾಖಲಿಸುವಂತಿಲ್ಲ. ಫಲಾನುಭವಿಗಳು ಸ್ವ-ಇಚ್ಛೆಯಿಂದ ಖಾಸಗಿ/twin/three sharing ವಾರ್ಡ್‌ಗಳಲ್ಲಿ ದಾಖಲಾಗಲು ಇಚ್ಛಿಸಿದಲ್ಲಿ ಅವರುಗಳಿಂದ ನಿಗದಿತ ನಮೂನೆಯಲ್ಲಿ ಸಹಮತಿ ಪತ್ರವನ್ನು ಪಡೆದು ದಾಖಲಿಸಕೊಳ್ಳತಕ್ಕದ್ದು. ಎಲ್ಲಾ ನೆಟ್‌ವರ್ಕ ಆಸ್ಪತ್ರೆಗಳು ಅವರಲ್ಲಿ ಲಭ್ಯವಿರುವ ವಿವಿಧ ವಾರ್ಡಗಳ ದರಪಟ್ಟಿಯನ್ನು ಎದ್ದುಕಾಣುವಂತೆ ಆಸ್ಪತೆಯ ಆವರಣದಲ್ಲಿ ಪ್ರದರ್ಶಿಸಬೇಕು.

- ಯಶಸ್ವಿನಿ ಯೋಜನೆಯಡಿ ನಿರ್ದಿಷ್ಟಪಡಿಸಿರುವ ಲೆನ್ಸ್/ಇಂಪ್ಲಾಂಟ್ಸ್‌ಕ್ಕಿಂತ ಹೆಚ್ಚಿನ ದರ್ಜೆಯ/ಆಮದು ಮಾಡಲಾಗಿರುವ ಲೆನ್ಸ್/ಇಂಪ್ಲಾಂಟ್ಸ್ ಗಳನ್ನು ಅಳವಡಿಸಿ ಶಸ್ತ್ರಚಿಕಿತ್ಸೆಯನ್ನು ಕೈಗೊಳ್ಳಲು ಸಹಮತಿಯನ್ನು ನೀಡುವಂತೆ ಯಾವುದೇ ಫಲಾನುಭವಿಗಳಿಗೆ ಆಸ್ಪತ್ರೆಯು ಒತ್ತಾಯಿಸಬಾರದು. ಯಶಸ್ವಿನಿ ಯೋಜನೆಯಡಿ ಅರ್ಹವಿರುವ ಹಾಗು ಆಸ್ಪತ್ರೆಗಳಲ್ಲಿ ಲಭ್ಯವಿರುವ ಉಳಿದ ಲೆನ್ಸ್/ಇಂಪ್ಲಾಂಟ್ಸ್ ಗಳ ವಿವರವನ್ನು ದರಪಟ್ಟಿಯೊಂದಿಗೆ ಫಲಾನುಭವಿಗೆ ತಿಳುವಳಿಕೆ ನೀಡುವುದು. ಯಶಸ್ವಿನಿ ಫಲಾನುಭವಿಯು ಹೆಚ್ಚಿನ ದರ್ಜೆಯ/ಆಮದು ಮಾಡಲಾಗಿರುವ ಲೆನ್ಸ್/ಇಂಪ್ಲಾಂಟ್ಸ್‌ಗಳನ್ನು ಅಳವಡಿಸಿ ಶಸ್ತ್ರಚಿಕಿತ್ಸೆಗೆ ಒಳಪಡಲು ಸಹಮತಿ ನೀಡಿದಲ್ಲಿ ಮಾತ್ರ ಆಸ್ಪತ್ರೆಯು ಈ ಕುರಿತು ಮುಂದುವರೆಯಬಹುದು.

- ಯಶಸ್ವಿನಿ ಫಲಾನುಭವಿಯು ರೂ.100/- ಅಥವಾ ಆಯಾ ಆಸ್ಪತ್ರೆಯು ನಿಗಧಿಪಡಿಸಿರುವ ದರ ಇದರಲ್ಲಿ ಯಾವುದೋ ಕಡಿಮೆಯೋ, ಆ ದರದಲ್ಲಿ ಹೊರ ರೋಗಿಯಾಗಿ "ಸಾಮಾನ್ಯ ತಪಾಸಣೆಗೆ" ಒಳಪಡಲು ಮತ್ತು ರೂ.200/-ಗಳಲ್ಲಿ "ವಿಶೇಷ ತಪಾಸಣೆಗೆ" ಅರ್ಹರಿರುತ್ತಾರೆ. ಸದರಿಯ ರಸೀದಿಯ ಆಧಾರದ ಮೇಲೆ ಮೂರು ತಿಂಗಳ ಅವಧಿಯವರೆಗೆ ಉಚಿತ ತಪಾಸಣೆ ಪಡೆಯಲು ಅವಕಾಶವಿದೆ. ಮುಂದುವರೆದು ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಹೊರ ರೋಗಿಯಾಗಿ ಯಶಸ್ವಿನಿ ಫಲಾನುಭವಿಯು ವೈದ್ಯಕೀಯ ತನಿಖೆಗೆ ಒಳಪಟ್ಟರೆ ಶೇ.25ರಷ್ಟು ರಿಯಾಯಿತಿಗೆ ಅರ್ಹರಿರುತ್ತಾರೆ. ಆದರೆ ಬಹಳಷ್ಟು ನೆಟ್‌ವರ್ಕ್ ಆಸ್ಪತ್ರೆಗಳು ಯಶಸ್ವಿನಿ ಫಲಾನುಭವಿಗಳಿಗೆ ಈ ಸೌಲಭ್ಯಗಳನ್ನು ವಿಸ್ತರಿಸುತ್ತಿಲ್ಲವೆಂದು ತಿಳಿದುಬಂದಿದೆ. ಇಂತಹ ದೂರುಗಳು ಸ್ವೀಕೃತವಾದಲ್ಲಿ ಸೌಲಭ್ಯಗಳನ್ನು ವಿಸ್ತರಿಸದೇ ಫಲಾನುಭವಿಯಿಂದ ಪಡೆದಿರುವ ಸಂಬಂಧಿಸಿದ ಮೊತ್ತವನ್ನು ಆಸ್ಪತ್ರೆಗಳ ಕ್ಲೇಂಗಳಿಂದ ಕಡಿತಗೊಳಿಸಿ ಫಲಾನುಭವಿಗಳಿಗೆ ಮರುಪಾವತಿಸಲು ಕ್ರಮಕೈಗೊಳ್ಳಲಾಗುವುದು.

- ಒಬ್ಬ ವ್ಯಕ್ತಿಗೆ ಸರ್ಕಾರದ ಬೇರೆ ಬೇರೆ ಯೋಜನೆಗಳಡಿ ಡೂಪ್ಲಿಕೇಟ್ ಬಿಲ್ ಕ್ಲೇಂ ಮಾಡಿರುವುದು ವರದಿಯಾದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೇ ಆಸ್ಪತ್ರೆಯನ್ನು ಯಶಸ್ವಿನಿ ನೆಟ್‌ವರ್ಕ್‌ನಿಂದ ತೆಗೆದು ಹಾಕಲಾಗುವುದು ಮತ್ತು ಆಸ್ಪತ್ರೆಯ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದು.

- ಆಸ್ಪತ್ರೆಯಲ್ಲಿ ಲಭ್ಯವಿರುವ ಮತ್ತು ಯಶಸ್ವಿನಿ ಯೋಜನೆಯಡಿ ಅನುಮತಿ ಪಡೆದಿರುವ ಎಲ್ಲಾ ವಿಧದ ಚಿಕಿತ್ಸೆಗಳಿಗೆ ಸಂಬಂಧಿಸಿದಂತೆ ಯಶಸ್ವಿನಿ ಫಲಾನುಭವಿಗಳಿಗೆ ಚಿಕಿತ್ಸೆ ನೀಡತಕ್ಕದ್ದು. ಯಶಸ್ವಿನಿ ಟ್ರಸ್ಟ ಇಂದ ಅನುಮತಿ ಪಡೆದಿರುವ ಚಿಕಿತ್ಸೆಗಳಲ್ಲಿ ಆಯ್ದ ಚಿಕಿತ್ಸೆಗಳನ್ನು ಮಾತ್ರ ಕೈಗೊಂಡು ಉಳಿದ ಚಿಕಿತ್ಸೆಗಳನ್ನು ಮಾಡಲು ನಿರಾಕರಿಸುತ್ತಿರುವ ಬಗ್ಗೆ ಫಲಾನುಭವಿಗಳಿಂದ ದೂರುಗಳು ಬಂದಲ್ಲಿ ಸದರಿ ಆಸ್ಪತ್ರೆಯ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

- ಮುಂದಿನ ವರ್ಷದಲ್ಲಿ ನವೀಕರಣಕ್ಕೆ ಅರ್ಜಿ ಸಲ್ಲಿಸಬೇಕಾದಲ್ಲಿ ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡಂತೆ ಕನಿಷ್ಠ ಯಶಸ್ವಿನಿ ಫಲಾನುಭವಿಗಳಿಗೆ ಶಸ್ತ್ರಚಿಕಿತ್ಸೆಯನ್ನು ನೀಡಿರತಕ್ಕದ್ದು. ಇಲ್ಲದಿದ್ದಲ್ಲಿ ಸಮರ್ಥ ಕಾರಣಗಳಿಲ್ಲದೇ ಅಂತಹ ಆಸ್ಪತ್ರೆಯ ನವೀಕರಣ ಪ್ರಸ್ತಾವೆಯನ್ನು ಅಂಗಿಕರಿಸಲಾಗುವುದಿಲ್ಲ.

| Sl. No. | Area | Single Specialty | Multi Specialty |
|---|---|---|---|
| 1. | Corporation | 30 | 50 |
| 2. | District Headquarters | 25 | 30 |
| 3. | Taluk Headquarters | 15 | 25 |
| 4. | Below Taluk | 15 | 20 |

ಆಸ್ಪತ್ರೆಗಳು ಮೇಲ್ಕಂಡಂತೆ ಸೂಚಿಸಿರುವ ಮಾರ್ಗಸೂಚಿಗಳಲ್ಲದೇ ಜಾರಿಯಲ್ಲಿರುವ ಪ್ರೋಟೋಕಾಲ್ ಗೈಡ್‌ಲೈನ್ಸ್ ಅನ್ನು ಕಡ್ಡಾಯವಾಗಿ ಪಾಲಿಸುವುದು. ಆಸ್ಪತ್ರೆಗಳ ವತಿಯಿಂದ ಯಾವುದೇ ಲೋಪಗಳು ಕಂಡುಬಂದಲ್ಲಿ ಅದನ್ನು ಗಂಭೀರವಾಗಿ ಪರಿಗಣಿಸಲಾಗುವುದು.

14/8/17

ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರಭಾರ)
ಯಶಸ್ವಿನಿ ಸಹಕಾರಿ ಆರೋಗ್ಯ ರಕ್ಷಣಾ ಟ್ರಸ್ಟ್.

ಪ್ರತಿಯನ್ನು:

1. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಎಲ್ಲಾ ಜಿಲ್ಲೆಗಳ ಯಶಸ್ವಿನಿ ಕೋ–ಆರ್ಡಿನೇಟರ್‌ಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಎಲ್ಲಾ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.